ನಂತರ ತುಲಸಿಬಾಗ್ ನಲ್ಲಿರುವ ಶನಿವಾರವಾಡಕ್ಕೆ ಭೇಟಿ ಕೊಡುವ ವೇಳೆಗೆ ಸಂಜೆಯಾಗಿತ್ತು.

ನಿಜಕ್ಕೂ ಶನಿವಾರವಾಡಾ ಮನೋಹರವಾಗಿತ್ತು. ಬಲಿಷ್ಠವಾದ ಕೋಟೆ ಬೃಹತ್ತಾದ ಹೆಬ್ಬಾಗಿಲಿನಿಂದ, ಭವ್ಯವಾದ ಬುರುಜುಗಳಿಂದ ಕಂಗೊಳಿಸುತ್ತಿತ್ತು. ಕೋಟೆಯ ಮೇಲೇರಲು ಕಡಿದಾದ ಮೆಟ್ಟಿಲುಗಳಿದ್ದರೆ ನಡುವೆ ಪೇಶ್ವೆಯರು ಸುಮಾರು 200 ವರ್ಷಗಳಷ್ಟು ಕಾಲ ಬಾಳಿ ಬದುಕಿದ್ದ ಶನಿವಾರವಾಡದ ತಳಪಾಯ ವಿಶಾಲವಾಗಿ ಹರಡಿಕೊಂಡಿತ್ತು. ಅಗ್ನಿ ಆಕಸ್ಮಿಕಕ್ಕೆ ತುತ್ತಾಗಿ 200 ವರ್ಷಗಳ ಹಿಂದೆ ಆ ಅರಮನೆ ನಾಶವಾಯಿತಂತೆ. ಪೇಶ್ವೆ ನಾನಾ ಸಾಹೇಬರ ಕೊನೆಯ ಮಗ ನಾರಾಯಣರಾವ್ ಅಧಿಕಾರಕ್ಕೇರಿದಾಗ ಅವನನ್ನು ಶತ್ರುಗಳು ಇದೇ ಶನಿವಾರವಾಡಾದಲ್ಲಿ ಕೊಲೆ ಮಾಡಿ, ತುಂಡು ತುಂಡಾಗಿ ಕತ್ತರಿಸಿ ನದಿಗೆಸೆದರಂತೆ. ಕೇವಲ ಹದಿನಾರು ವರ್ಷ ವಯಸ್ಸಿನ ಆ ಹುಡುಗ ರಕ್ಷಣೆಗೆಂದು ತನ್ನ ಚಿಕ್ಕಪ್ಪನನ್ನು ಕೂಗಿದ್ದನಂತೆ. ಈಗಲೂ ಹುಣ್ಣಿಮೆಯ ರಾತ್ರಿ 'ಚಿಕ್ಕಪ್ಪ, ನನ್ನನ್ನು ಕಾಪಾಡಿ' ಎಂಬ ಕೂಗು ಮರಾಠಿಯಲ್ಲಿ ಕೇಳುತ್ತದಂತೆ. ಇವೆಲ್ಲವನ್ನು ಪೂನಂ ಹೇಳುತ್ತಿದ್ದರೆ ಅಮ್ಮ ಅತ್ಯಾಸಕ್ತಿಯಿಂದ ಕೇಳುತ್ತಿದ್ದಳು. ನಾನು ಅನುಮಾನದಿಂದಲೇ ಆ ಮಾತುಗಳನ್ನು ಆಲಿಸಿದ್ದೆ.

'ಸಾಮಾನ್ಯವಾಗಿ ಒಂದೊಂದು ಅರಮನೆಗೆ, ಒಂದೊಂದು ಕೋಟೆಗೆ ಇಂತಹ ಹತ್ತಾರು ಕಥೆಗಳನ್ನು ಹೇಳ್ತಾರಪ್ಪ, ಅಂಥಹ ಕಥೆಗಳೆಲ್ಲಾ ಖಂಡಿತವಾಗಿ ಕಲ್ಪಿತ ಕಥೆಗಳೇ ಆಗಿರುತ್ತೆ..' ಎಂದು ನಾನು ಪೂನಂಳ ಮಾತುಗಳನ್ನು ತಳ್ಳಿ ಹಾಕಿದ್ದೆ. ಅಮ್ಮ ದುರುಗುಟ್ಟಿಕೊಂಡು ನನ್ನತ್ತ ನೋಡಿದ್ದಳು.

ಇನ್ನೇನು ಶನಿವಾರವಾಡಾದಿಂದ ಹೊರಡಬೇಕೆನ್ನುವಾಗ ಅಮ್ಮ ಜೋರಾಗಿ ಕಿರುಚಿಕೊಂಡಿದ್ದಳು. ಮಗ ನಿನಾದನ ಪತ್ತೆಯಿರಲಿಲ್ಲ. ಇದುವರೆಗೆ ನಮ್ಮ ಜೊತೆಯಾಗಿ ನಡೆದು ಬರುತ್ತಿದ್ದ ಹುಡುಗ ಎಲ್ಲಿ ಹೋದ? ನಾನು, ಪೂನಂ ಗಾಬರಿಯಾಗಿ ಅವಳ ಮಗಳನ್ನು ಅಮ್ಮನ ಜೊತೆ ಮಾಡಿ ಕೂರಿಸಿ, ಮತ್ತೆ ಕೋಟೆಯೇರಿ ನಿನಾದನಿಗಾಗಿ ಹುಡುಕಾಡಿದ್ದೆವು. ಒಂದೆಡೆ ಬಹಳಷ್ಟು ಜನರು ಗುಂಪಾಗಿದ್ದರು. ಆತಂಕದಿಂದ ಅತ್ತ ಹೋಗಿ ನೋಡಿದಾಗ ಆಘಾತವೇ ಆಗಿತ್ತು. ನಿನಾದ ಎತ್ತರವಾದ ಕೋಟೆಯಿಂದ ಜಿಗಿಯುವ ಯತ್ನ ಮಾಡುತ್ತಿದ್ದರೆ, ಕೆಲವರು ಅವನು ಬೀಳದಂತೆ ತಡೆಯುತ್ತಿದ್ದರು. ನಾನು ಆವೇಶದಿಂದ ಮಗನ ಹತ್ತಿರ ಹೋಗಿ ಕೆನ್ನೆಗೆರಡು ಬಾರಿಸಿದ್ದೆ. ಇಷ್ಟು ಹೊತ್ತು ಆವೇಶದಿಂದಿದ್ದವನು ಈಗ ಅಳಲು ಶುರು ಮಾಡಿದ್ದ. ಅಲ್ಲಿ ನೆರೆದಿದ್ದವರು ತಲೆಗೊಂದರಂತೆ ಮಾತನಾಡಲಾರಂಭಿಸಿದಾಗ ಅವಮಾನವಾಗಿ ತಲೆ ತಗ್ಗಿಸುವಂತಾಯಿತು. ನಮ್ಮ ಸುತ್ತಾಟವನ್ನೆಲ್ಲಾ ಅಲ್ಲಿಗೇ ನಿಲ್ಲಿಸಿ ಪೂನಂಳ ಅಣ್ಣನ ಮನೆಗೆ ಹಿಂದಿರುಗುವ ನಿರ್ಧಾರ ಮಾಡಿದ್ದೆವು. ದಾರಿಯುದ್ದಕ್ಕೂ ಕಣ್ಣೀರು ಸುರಿಸುತ್ತಾ ನನ್ನನ್ನಪ್ಪಿಕೊಂಡೇ ಬಂದ ನಿನಾದ್ ಪೂನಂಳ ಅಣ್ಣನ ಫ್ಲಾಟಿಗೆ ಬಂದೊಡನೆ ಮತ್ತೆ ಅದೇನಾಯಿತೋ ಮೆಟ್ಟಿಲೇರಿ ಟೆರೇಸ್ ಮೇಲೇರಲು ಓಡತೊಡಗಿದ್ದ. ಎಲ್ಲರೂ ಸೇರಿ ಅವನನ್ನು ಹಿಡಿದು ಕೋಣೆಯಲ್ಲಿ ಕೂಡಿ ಹಾಕಬೇಕಾದರೆ ಸಾಕುಸಾಕಾಯಿತು.

ಅಮ್ಮ ನನ್ನತ್ತ ನೋಡಿ ಅಸಹನೆಯಿಂದ ಮುಖವನ್ನು ಗಂಟಿಕ್ಕತೊಡಗಿದ್ದರೆ ನನಗೆ ಆಘಾತವಾಗಿತ್ತು. ಏನಾಗಿದೆ ನಿನಾದನಿಗೆ, ಹೇಗಿದ್ದವನು ಹೇಗಾಗಿಬಿಟ್ಟ? ಸುತ್ತಲೂ ಕತ್ತಲು ಕವಿದಂತಾಗಿತ್ತು ನನಗೆ.

'ಗಾಬರಿ ಬೇಡ ಸಿಸ್ಟರ್, ನನ್ನ ಫ್ರೆಂಡೊಬ್ಬ ಸೈಕಿಯಾಟ್ರಿಸ್ಟ್ ಪಕ್ಕದ ಬ್ಲಾಕಿನಲ್ಲೇ ಇದ್ದಾನೆ. ನೀವು 'ಹುಂ' ಅಂದ್ರೆ ಅವ್ನಿಗೆ ಕಾಲ್ ಮಾಡ್ತೀನಿ...' ಪೂನಂಳ ಅಣ್ಣನೆಂದಾಗ ಒಪ್ಪಿಕೊಂಡಿದ್ದೆ. ಹೇಗೋ ಮಗ ಸರಿಯಾದರೆ ಸಾಕೆನಿಸಿತ್ತು ನನಗೆ. ಹೇಳಿದಂತೆ ಹತ್ತೇ ನಿಮಿಷಕ್ಕೆ ಪೂನಂಳ ಅಣ್ಣನ ಗೆಳೆಯ ಡಾ.ಶರತ್ಚಂದ್ರ ಫ್ಲಾಟಿಗೆ ಬಂದಿದ್ದರು. ಸ್ನೇಹಪರ ನಡವಳಿಕೆಯಿಂದ ಎಲ್ಲರನ್ನೂ ತನ್ನತ್ತ ಸೆಳೆಯುವ ಶರತ್ಚಂದ್ರರದ್ದು ಆಕರ್ಷಕ ವ್ಯಕ್ತಿತ್ವವಾಗಿತ್ತು. ಆತನಿಗೆ 46–48ರ ಪ್ರಾಯವಿರಬಹುದಷ್ಟೇ. ಅವರನ್ನು ನೋಡಿಯೇ ನನ್ನ ದುಗುಡ ಸ್ವಲ್ಪ ಕಡಿಮೆಯಾಗಿತ್ತು. ಅವರು ಕರ್ನಾಟಕದ ಕಡೆಯವರಂತೆ. ಕನ್ನಡದಲ್ಲೇ ಮಾತನಾಡಿ ತಮ್ಮನ್ನು ಪರಿಚಯಿಸಿಕೊಂಡಿದ್ದರು.

ಶರತ್ಚಂದ್ರರು ಧೈರ್ಯ ಹೇಳುತ್ತಾ ಹೆದರಿದ ಗುಬ್ಬಚ್ಚಿಯಂತೆ ಕೋಣೆಯಲ್ಲಿ ಅವಿತು ಕುಳಿತಿದ್ದ ಮಗನನ್ನು ಹೊರ ಕರೆದಿದ್ದರು. ತಕ್ಷಣ ಅವನು ಮತ್ತೆ ಓಡಲು ಶುರು ಮಾಡಿದ್ದ. ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಡಾಕ್ಟರ್ ತಮ್ಮ ಜೊತೆ ತಂದಿದ್ದ ಮೆಡಿಕಲ್ ಕಿಟ್ಟಿನಿಂದ ಸಿರಿಂಜ್ ತೆಗೆದು ಔಷಧ ತುಂಬಿ ಮಗನಿಗೆ ಚುಚ್ಚಿದ್ದರು. ಒಂದೆರಡು ಮಾತ್ರೆಗಳನ್ನು ನುಂಗಿಸಿದ್ದರು. ಹತ್ತೇ ನಿಮಿಷದೊಳಗೆ ಮಗ ನಿನಾದ್ ಗಾಢ ನಿದ್ರೆಗೆ ಜಾರಿದ್ದ.

ನಂತರ ಡಾಕ್ಟರ್ ಶರತ್ಚಂದ್ರ ನನ್ನೊಂದಿಗೆ ನಮ್ಮ ಕುಟುಂಬದ ಬಗ್ಗೆ, ನಿನಾದನ ನಡವಳಿಕೆಯ ಬಗ್ಗೆ ಪ್ರತ್ಯೇಕವಾಗಿ ಮಾತನಾಡಿದ್ದರು. ಮೊದಲಿನಿಂದಲೂ ಚುರುಕಾಗಿ ಎಲ್ಲರೊಂದಿಗೆ ಹೊಂದಿಕೊಂಡು, ಶಾಲೆಯ ಹೆಮ್ಮೆಯಾಗಿದ್ದ ಮಗನ ಬಗ್ಗೆ ಹೇಳಿ ಕಣ್ತುಂಬಿಕೊಂಡಿದ್ದೆ. ನಮ್ಮ ಕುಟುಂಬದ ಬಗ್ಗೆ ಏನೆಂದು ಹೇಳಬೇಕಿತ್ತು?

ಹನ್ನೆರಡು ವರ್ಷಗಳ ಹಿಂದಿನ ನನ್ನ ಸಾಂಸಾರಿಕ ಬದುಕಿನ ಚಿತ್ರಗಳು ಮನಸ್ಸನ್ನು ಇರಿಯುತ್ತಲೇ ಇರುತ್ತವಲ್ಲ. ಆಗಷ್ಟೇ ಬಿ.ಇ. ಮುಗಿಸಿ ಉದ್ಯೋಗದ ಬೇಟೆಯಲ್ಲಿದ್ದ ನನ್ನನ್ನು ಅಮೇರಿಕದಲ್ಲಿ ಉದ್ಯೋಗದಲ್ಲಿದ್ದ ದೀಪಕ್‌ನೊಂದಿಗೆ ಆ ವಿಧಿ ವಿವಾಹ ಬಂಧನದ ಮೂಲಕ ಬೆಸೆದಿತ್ತು. ಮದುವೆಯಾಗಿ ಒಂದು ತಿಂಗಳು ನನ್ನೊಂದಿಗೆ ಸಂಸಾರ ನಡೆಸಿದವನು ಅಮೇರಿಕಕ್ಕೆ ಹೋದ ಮೇಲೆ ನನ್ನನ್ನು ಕರೆಸಿಕೊಳ್ಳುತ್ತೇನೆಂದು ಹೇಳಿ ಹೋದವನು ಮತ್ತೆಂದೂ ಹಿಂದಿರುಗಲಿಲ್ಲ. ಅವನಿಗಾಗಲೇ ಅಮೇರಿಕದ ಹುಡುಗಿಯೊಂದಿಗೆ ವಿವಾಹವಾಗಿತ್ತೆಂದೂ ಇದು ಕೇವಲ ಹೆತ್ತವರ ಒತ್ತಾಯಕ್ಕಾದ ನಾಮಕಾವಸ್ಥೆ ಮದುವೆಯೆಂದು ತಿಳಿದಾಗ ಬೆಚ್ಚಿದ್ದೆ. ನಾನಾದರೂ ಏನು ಮಾಡಲು ಸಾಧ್ಯವಿತ್ತು? ಆ ಹೊತ್ತಿಗಾಗಲೇ ನಾನು ಗರ್ಭಿಣಿಯಾಗಿದ್ದೆ. ದೀಪಕ್ ನನಗೆ ಮೋಸ ಮಾಡಿದ್ದರೂ ಹೊಟ್ಟೆಯಲ್ಲಿದ್ದ ಏನೂ ಅರಿಯದ ಕಂದಮ್ಮನ ಮೇಲೆ ಮಮಕಾರ ಮೂಡಿತ್ತು. ಮಗುವನ್ನು ಹೆತ್ತು ಅದನ್ನು ಬೆಳೆಸುವ ನಿರ್ಧಾರ ಮಾಡಿದ್ದೆ. ಕಾನೂನಿನ ಹೋರಾಟ ಮಾಡಿ ದೀಪಕ್‌ನಿಂದ ನಾನು ವಿಚ್ಛೇದನವನ್ನು ಪಡೆದುಕೊಂಡರೂ, ಪೂರ್ವಾಪರ ವಿಚಾರಿಸದೆ ಫಾರಿನ್ ಅಳಿಯ ಸಿಗುತ್ತಾನೆಂಬ ಆಸೆಯಿಂದ ಮಗಳನ್ನು ಅಯೋಗ್ಯನಿಗೆ ಧಾರೆ ಎರೆದ ಸಂಕಟದಲ್ಲಿ ಹೃದಯಾಘಾತದಿಂದ ಮೃತರಾಗಿದ್ದರು ಅಪ್ಪ. ಒಬ್ಬಳೇ ಮಗಳಾದ ನಾನು ಊರಲ್ಲಿದ್ದ ಜಮೀನನ್ನು ಮಾರಿಸಿ ಅಮ್ಮನನ್ನು ನನ್ನ ಬಳಿ ಇರಿಸಿಕೊಂಡಿದ್ದೆ. ಹೇಗೋ ಹಳಿ ತಪ್ಪಿದ ರೈಲು ಸರಿ ದಾರಿಗೆ ಬಂದಿತೆಂದು ನಿಟ್ಟುಸಿರು ಬಿಡುವಾಗಲೇ ಈಗ ಮತ್ತೆ ನಿನಾದನ ವಿಚಿತ್ರ ನಡವಳಿಕೆ ನನ್ನ ಆಘಾತವನ್ನು ಹೆಚ್ಚು ಮಾಡಿತ್ತು.

ಅಷ್ಟಿಷ್ಟು ನನ್ನ ಸಾಂಸಾರಿಕ ಬದುಕಿನ ಬಗ್ಗೆ ಶರತ್ಚಂದ್ರರಿಗೆ ಹೇಳಿದ್ದೆ. ಅವರು ಮರುದಿನ ಬರುತ್ತೇನೆಂದು ಸಾಂತ್ವನ ಹೇಳಿ ಹೊರಟೇ ಹೋಗಿದ್ದರು.

'ಏನೋ ಮೊಮ್ಮಗ ಹೀಗಾದ್ನಲ್ಲ ಅಂತ ಒರಟಾಗಿ ಮಾತನಾಡ್ದೆ, ಸಮಾಧಾನವಾಗಿರೇ ನೇತ್ರ....' ಎಂದು ಅಮ್ಮನೂ ನನ್ನನ್ನು ಸಮಾಧಾನ ಪಡಿಸಿದ್ದಳು. ಮಗನಿಗೇನಾಯಿತೋ ಎಂಬ ಚಿಂತೆ ಬೆಳಗ್ಗಿನಿಂದ ನನ್ನನ್ನು ಹಣ್ಣು ಮಾಡಿತ್ತು. ಸಂಜೆಯಾದರೂ ಡಾ.ಶರತ್ಚಂದ್ರರ ಸುಳಿವಿರಲಿಲ್ಲ. ಅವರನ್ನು ಮೊಬೈಲಿನ ಮೂಲಕ ಸಂಪರ್ಕಿಸಲು ಯತ್ನಿಸಿ ವಿಫಲಳಾಗಿದ್ದೆ.

'ನೀವೇನೂ ಚಿಂತೆ ಮಾಡ್ಬೇಡಿ, ನಿಮ್ಮ ಮಗನಿಗೆ ಏನೂ ಆಗಲ್ಲ, ಶರತ್ ಇದ್ದಾನಲ್ಲ, ಮದ್ವೆಯಾದ್ರೆ ಎಲ್ಲಿ ತನ್ನ ಪ್ರೊಫೆಷನ್‌ಗೆ ತೊಂದ್ರೆಯಾಗುತ್ತೋ




## ಮೋಹ

ಆಕಾಶದೆತ್ತರ
ಹಳದಿ ಲೋಹದ ಮೋಹ!
ಇರದಿದ್ದರೂ ತುತ್ತಿಗೆ ಅನ್ನ
ಬೇಕೆನಿಸುತ್ತೆ ಚಿನ್ನ!

– ದೇವಕಿಸುತ